







ಕೋಟೆಯನ್ನು ಇನ್ನಷ್ಟು ಭದ್ರಗೊಳಿಸುವ ಕಾರ್ಯ ನಡೆಯಿತು.

ಈ ಸಂಸ್ಥಾನದ ಉತ್ತರದಲ್ಲಿ ಹರಿಯುವ ಪೆನ್ನಾ ನದಿ ಸುಮಾರು 250 ಅಡಿಗಳಷ್ಟು ಆಳವಾಗಿದೆ, ಮಾತ್ರವಲ್ಲ ಸುಮಾರು 300 ಅಡಿಗಳಷ್ಟು ಅಗಲವಾಗಿದೆ. ಈ ನದಿಯ ದಂಡೆಗಳಲ್ಲಿ ಭಾರೀ ಗಾತ್ರದ ಕೆಂಪು ಗ್ರಾನೈಟ್ ಕಲ್ಲುಗಳ ರಾಶಿಗಳನ್ನು ಕಾಣಬಹುದು. ಇದೊಂದು ಪ್ರಾಕೃತಿಕ ರಕ್ಷಣೆಯಾಗಿದೆ. ಮಾತ್ರವಲ್ಲ ಇಂತಹ ಗಂಡಿ (ಕಣಿವೆ) ಪ್ರಕೃತಿಯ ವಿಸ್ಮಯವೂ ಹೌದು. ಬಂಡೆಗಳ ಮೇಲೆ ಕುಳಿತು ಗಂಡಿಯನ್ನು ವೀಕ್ಷಿಸುವಾಗ ಮೈ ಝುಂ ಎನ್ನುತ್ತದೆ. ಈ ನದೀ ದಂಡೆಯಲ್ಲಿ ಅಲ್ಲಲ್ಲಿ ಮಾನವ ನಿರ್ಮಿತ ರಕ್ಷಣಾ ಕೋಟೆಗಳನ್ನೂ ಕಾಣಬಹುದು.

ಈ ಕೋಟೆಯ ಒಳಗಡೆ ಒಂದು ವಿಶಾಲ ಕೊಳವಿದೆ. ರಾಯಲಚೆರುವು ಎಂದು ಕರೆಯಲ್ಪಡುವ ಈ ಕೊಳವು ಸ್ಥಳೀಯರಿಗೆ ಕುಡಿಯಲು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತದೆ. ಈ ಕೆರೆಗೆ ಸುಂದರವಾದ ಮೆಟ್ಟಿಲುಗಳಿದ್ದ ಕುರುಹುಗಳು ಈಗಲೂ ಕಾಣಿಸುತ್ತವೆ. ಕೆರೆಯ ಸಮೀಪದಲ್ಲಿ ಒಂದು ಜಾಮಿಯಾ ಮಸೀದಿಯಿದ್ದು ಅದರ ಎರಡು ಮಿನಾರ್‌ಗಳು ಬಹಳ ಸುಂದರವಾಗಿವೆ. 17ನೇ ಶತಮಾನದಲ್ಲಿ ಗೊಲ್ಕೊಂಡದ ಮುಸ್ಲಿಂ ದೊರೆಗಳು ಈ ಪ್ರದೇಶವನ್ನು ವಶಪಡಿಸಿಕೊಂಡ ನಂತರ ಈ ಮಸೀದಿಯ ನಿರ್ಮಾಣ ಆಗಿದ್ದಿರಬೇಕು.

ಈ ಕೋಟೆಯೊಳಗೆ ಎರಡು ದೇವಾಲಯಗಳನ್ನು ಕಾಣಬಹುದು. ಮಾಧವರಾಯ ದೇವಾಲಯ ಮತ್ತು ರಂಗನಾಥ ದೇವಾಲಯ. ಈ ಎರಡೂ ದೇವಾಲಯಗಳು ಈಗ ಪಾಳು ಬಿದ್ದಿವೆ. ಮಾಧವರಾಯ ದೇವಾಲಯದ ರಾಜಗೋಪುರ ಬಹಳ ಎತ್ತರವಾಗಿದ್ದು ಆಕರ್ಷಕ ಕೆತ್ತನೆ ಕೆಲಸಗಳಿಂದ ಕೂಡಿದೆ. ಇಲ್ಲಿನ ಮಂಟಪಗಳ ಕಂಬಗಳು ಮತ್ತು ಮೇಲ್ಛಾವಣಿಗಳಲ್ಲಿ ಸುಂದರವಾದ ಶಿಲ್ಪಗಳನ್ನು ಕಾಣಬಹುದು. ಇಲ್ಲಿ ಯಾವುದೇ ಪೂಜಾ ವಿಗ್ರಹವಿಲ್ಲ. ಕೋಟೆಯ ಉತ್ತರ ದಿಕ್ಕಿನಲ್ಲಿ ಇರುವ ರಂಗನಾಥ ದೇವಾಲಯಕ್ಕೆ ರಾಜಗೋಪುರವಿಲ್ಲ. ಒಳಗಡೆಯ ಗುಡಿಯ ಮಂಟಪ ಹಾಗೂ ಗೋಡೆಗಳಲ್ಲಿ ವಿವಿಧ ರೀತಿಯ ಶಿಲ್ಪಗಳನ್ನು ಕಾಣಬಹುದು.

ಈ ಕೋಟೆಯೊಳಗೆ ನಾವು ಕಾಣಸಿಗುವ ಇನ್ನೊಂದು ವಿಶೇಷ ಕಟ್ಟಡವೆಂದರೆ, ಧಾನ್ಯ ಸಂಗ್ರಹಾಲಯ. ಈ ಕಟ್ಟಡದ ಗಾತ್ರವನ್ನು ಗಮನಿಸಿದರೆ, ಆ ಕಾಲದಲ್ಲಿ ಇಲ್ಲಿ ಎಷ್ಟು ಧಾನ್ಯ ಸಂಗ್ರಹವಾಗುತ್ತಿತ್ತು ಎಂದು ಊಹಿಸಬಹುದು. ಅಂತೆಯೇ, ಇಲ್ಲಿ ಒಂದು ಬಂಧೀಖಾನೆಯೂ ಇದೆ. ಈಗ ಇದರ ಒಳಗಡೆಗೆ ಯಾರಿಗೂ ಪ್ರವೇಶವಿಲ್ಲ.

ಒಂದು ಕಾಲದಲ್ಲಿ ಉತ್ತಮ ಸ್ಥಿತಿಯಲ್ಲಿದ್ದ ಈ ರಾಜ ಸಂಸ್ಥಾನದ

